ಸಂ:ಡಿಬಿಸಿಎಂ/ಬೆಂಗ್ರಾ/ಮೊದೇವಶಾ/ವಿನಿ/ಸಿಆರ್‌-170/2009-10

ಜಿಲ್ಲಾಧಿಕಾರಿಯವರ ಕಛೇರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ದಿನಾಂಕ:9/2/2010.

# ' *ಟೆಂಡರ್ ಪ್ರಕಟಣೆ* '

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು.

**ಉಲ್ಲೇಖ:**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪತ್ರ ಸಂ:ಕವಶಿಸಸ/ಸಿಆರ್(ಶಿ) 208/09-10, ದಿನಾಂಕ:29/12/2009.

* * * * *

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಉಲ್ಲೇಖದ ಪತ್ರದಲ್ಲಿ ಜಿಲ್ಲಾಧಿಕಾರಿಯವರಿಗೆ ಅನುದಾನವನ್ನು ಬಿಡುಗಡೆ ಮಾಡಿದೆ. ಈ ಅನುದಾನದಲ್ಲಿ ಖರೀದಿಸಬೇಕಾಗಿರುವ ವಸ್ತುಗಳ ವಿವರ ಪರಿಮಾಣ ಹಾಗೂ ವಿನ್ಯಾಸಗಳನ್ನು ಸಹ ತಿಳಿಸಲಾಗಿದೆ. ಅದರಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರಡಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸರಬರಾಜು ಸಂಸ್ಥೆಗಳ/ತಯಾರಿಕ ಸಂಸ್ಥೆಗಳು ಟೆಂಡರ್‌ಗಳನ್ನು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ವಿಧಾನ ವೀಧಿ, ಬೆಂಗಳೂರು ಇವರ ಕಛೇರಿಯಲ್ಲಿ ರೂ.500/-(ಐದು ನೂರು ರೂಪಾಯಿಗಳು) ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಹೆಸರಿನಲ್ಲಿ ಡಿ.ಡಿ. ಪಡೆದು, ಪಾವತಿಸಿ ಟೆಂಡರ್ ದಾಖಲೆ ಪಡೆಯಬಹುದು. ಟೆಂಡರ್ ಅರ್ಜಿಗಳನ್ನು 2 ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. ಟೆಂಡರ್‌ನಲ್ಲಿ ಇಟ್ಟಿರುವ ಟೆಕ್ನಿಕಲ್ ಬಿಡ್ ಲಕೋಟೆಗಳನ್ನು ಪ್ರಥಮವಾಗಿ ತೆರೆಯಲಾಗುವುದು. ಟೆಕ್ನಿಕಲ್ ಬಿಡ್ ಲಕೋಟೆಯಲ್ಲಿ ಇರಬೇಕಾದ ಎಲ್ಲಾ ದಾಖಲೆಗಳು ಸರಿಯಾಗಿದ್ದಲ್ಲಿ ಮಾತ್ರ 2ನೇ ಲಕೋಟೆಯಲ್ಲಿರುವ ಧರಪಟ್ಟಿ ಲಕೋಟೆಯನ್ನು ತೆರೆಯಲಾಗುವುದು.

1) ಟೆಂಡರ್ ಅರ್ಜಿಗಳನ್ನು ದಿನಾಂಕ: 11/2/2010 ರಿಂದ 26/2/2010 ವರೆಗೆ ಪಡೆಯಬಹುದು.
2) ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಮೊಹರು ಮಾಡಿದ ಎರಡು ಲಕೋಟೆ ಪದ್ಧತಿಯಲ್ಲಿ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಈ ಕಛೇರಿಗೆ ಸಲ್ಲಿಸಬಹುದು. ಟೆಂಡರ್ ಅರ್ಜಿಗಳನ್ನು ಕಡೆಯ ದಿನಾಂಕ: 26/2/2010 ಮಧ್ಯಾಹ್ನ 4.00 ಗಂಟೆಯೊಳಗೆ ಸಲ್ಲಿಸಬೇಕು.
3) ಮೊಹರಾಗಿರುವ ಟೆಕ್ನಿಕಲ್ ಬಿಡ್ ಲಕೋಟೆಗಳನ್ನು ಅದೇ ದಿನದಲ್ಲಿ ಜಿಲ್ಲಾಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಜಿಲ್ಲಾ ಸಮಿತಿಯ ಸಮ್ಮುಖದಲ್ಲಿ ತೆರೆಯಲಾಗುವುದು. ಟೆಂಡರ್ ಅರ್ಜಿಗಳನ್ನು ಸಲ್ಲಿಸಿದ ಸಂಸ್ಥೆಗಳ ಪ್ರತಿನಿಧಿ ಈ ಸಮಯದಲ್ಲಿ ಹಾಜರಿರಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಈ ಕಛೇರಿಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಅಲ್ಲದೆ ಈ ವಿವರಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯಬಹುದಾಗಿದೆ. **(www.bangalorerural.nic.in)**

ಸಹಿ/
ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಪ್ರತಿಯನ್ನು ಕೆಳಕಂಡವರಿಗೆ ಸೂಕ್ತ ಕ್ರಮ ಹಾಗೂ ಮಾಹಿತಿಗಾಗಿ ಸಲ್ಲಿಸಿದೆ:–**

1) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ, ಬೆಂಗಳೂರು.
3) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
4) ಜಿಲ್ಲಾ ಬುಲೆಟಿನ್ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5) ಕಛೇರಿ ಪ್ರತಿಗಳು.

ಜಿಲ್ಲಾಧಿಕಾರಿಯವರ ಪರವಾಗಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಬೆಂಗಳೂರು.

**ನಿಬಂಧನೆಗಳು:–**

1) ಸ್ಪೆಷಿಫಿಕೇಷನ್ ಪ್ರಕಾರ ಪೂರೈಸಲ್ಪಡುವ ಸಾಮಗ್ರಿಗಳು ಉತ್ತಮ ಗುಣಮಟ್ಟದ್ದಾಗಿರಬೇಕು. ಮತ್ತು ಮಾರುಕಟ್ಟೆ ಬೆಲೆಗೆ ಯೋಗ್ಯವಾಗಿರಬೇಕು.
2) ಟೆಂಡರ್ ಸಲ್ಲಿಸುವ ಸಂಸ್ಥೆಯು ಕರ್ನಾಟಕ ಶಾಪ್ಸ್ ಅಂಡ್ ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ ಕಾಯಿದೆ ಪ್ರಕಾರ ನೋಂದಣಿ ಪಡೆದಿರಬೇಕು. ಮತ್ತು ಟೆಂಡರ್‌ಗಿಟ್ಟ ಸಾಮಾಗ್ರಿಗಳನ್ನು ಉತ್ಪಾದನೆ ಮಾಡುವಂತಹ/ ಸಗಟು ಮಾರಾಟ ಮಾಡುವಂತಹ ಸಂಸ್ಥೆಯಾಗಿರಬೇಕು.
3) 2007–08 ಮತ್ತು 2008–09ನೇ ಸಾಲಿನ ಆಡಿಟ್ ವರದಿ ಬ್ಯಾಲೆನ್ಸ್ ಶೀಟ್‌ನೊಂದಿಗೆ ಚಾರ್ಟೆಡ್ ಅಕೌಂಟೆಂಟ್ ರವರಿಂದ ದೃಢೀಕರಿಸಿ ಸಲ್ಲಿಸಬೇಕು.
4) ಆಸಕ್ತಿಯುಳ್ಳ ಅರ್ಹ ವ್ಯಕ್ತಿ/ಸಂಸ್ಥೆಗಳವರು ಟೆಂಡರ್‌ನಲ್ಲಿ ನಮೂದಿಸಿದ ಎಲ್ಲಾ ನಾಲ್ಕು ಗುಂಪುಗಳಲ್ಲಿಯ ಎಲ್ಲಾ ಸಾಮಾಗ್ರಿಗಳಿಗೆ ಅಥವಾ ಯಾವುದಾದರೂ ಒಂದು ಗುಂಪಿನ ಎಲ್ಲಾ ಸಾಮಾಗ್ರಿಗಳಿಗೆ ದರಗಳನ್ನು ನಮೂದಿಸಬೇಕಾಗಿರುತ್ತದೆ. (ಆಯಾ ಗುಂಪಿನ ಒಟ್ಟು ಪರಿಮಾಣದ ಕಡಿಮೆ ದರಗಳನ್ನು ಅಂಗೀಕರಿಸುವ ಷರತ್ತಿಗೊಳಪಟ್ಟಿರುತ್ತದೆ.
5) ಟೆಂಡರ್‌ನ್ನು ಮೊಹರು ಮಾಡಿದ ಲಕೋಟೆಯ ಮೇಲೆ " ಮೊರಾರ್ಜಿ ದೇಸಾಯಿ ವಸತಿಶಾಲೆ, ಸೂಲಿಬೆಲೆ ಇಲ್ಲಿಗೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್ " ಎಂದು ಸ್ಪಷ್ಟವಾಗಿ ನಮೂದಿಸಬೇಕು.
6) ಯಶಸ್ವಿ ಟೆಂಡರ್‌ದಾರರು ಸಾಮಗ್ರಿಗಳನ್ನು ಖರೀದಿ ಆದೇಶ ನೀಡಿದ 15 ದಿನದೊಳಗಾಗಿ ಆಯಾಯ ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಲು ಶಕ್ತರಿರಬೇಕು. ಸಾಗಾಣಿಕೆ ವೆಚ್ಚವನ್ನು ಪ್ರತ್ಯೇಕವಾಗಿ ನೀಡಲಾಗುವುದಿಲ್ಲ. ಸರಬರಾಜು ಮಾಡುವ ಸಮಯದಲ್ಲಿ ಆಗಬಹುದಾದ ನಷ್ಟಕ್ಕೆ ಇಲಾಖೆಯಾಗಲೀ, ಸರ್ಕಾರವಾಗಲೀ ಜವಾಬ್ದಾರರಾಗಿರುವುದಿಲ್ಲ.
7) ಯಶಸ್ವಿ ಟೆಂಡರುದಾರರು ಸರಬರಾಜು ಮಾಡುವ ಮಾದರಿ ವಸ್ತುಗಳನ್ನು ಪ್ರದರ್ಶಿಸಿ, ಜಿಲ್ಲಾ ಮಟ್ಟದ ಸಮಿತಿಯ ಅನುಮೋದನೆ ಪಡೆದ ನಂತರ ಒಪ್ಪಿತ ಮಾದರಿ ವಸ್ತುಗಳನ್ನೇ ಸರಬರಾಜು ಮಾಡಬೇಕು.
8) ಸರಬರಾಜು ಮಾಡಬೇಕಾದ ವಸ್ತುಗಳನ್ನು ಮಾದರಿಯೊಂದಿಗೆ ಪರಿಶೀಲಿಸಿ ಮಾದರಿಗಳಿಗೆ ತಾಳೆಯಾದಲ್ಲಿ ಮಾತ್ರ ಸಾಮಗ್ರಿಗಳ ದಾಸ್ತಾನು ದೃಢೀಕರಣವನ್ನು ಬಿಲ್ಲುಗಳ ಮೇಲೆ ಪ್ರಾಂಶುಪಾಲರಿಂದ ಸ್ವೀಕರಿಸಿದ ತರುವಾಯ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.
9) ಟೆಂಡರ್ ಸಲ್ಲಿಸುವ ಸಂಸ್ಥೆ ಕಪ್ಪು ಪಟ್ಟಿಯಲ್ಲಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ ಲಗತ್ತಿಸಬೇಕು.
10) ಚುನಾಯಿತ ಸದಸ್ಯರು ಮತ್ತು ಕಪ್ಪು ಪಟ್ಟಿಯಲ್ಲಿರುವ ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಿಲ್ಲ.
11) ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರ ಜಿಲ್ಲಾ ಸಮಿತಿ ಹೊಂದಿರುತ್ತದೆ.
12) ಅನುಮೋದಿತ ಟೆಂಡರ್‌ದಾರರು ನಿಗಧಿತ ವೇಳೆಯಲ್ಲಿ ಸಾಮಗ್ರಿಗಳನ್ನು ಸರಬರಾಜು ಮಾಡದಿದ್ದಲ್ಲಿ ಇ.ಎಂ.ಡಿ. ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಲ್ಲದೆ ನಿಯಮಾನುಸಾರ ಟೆಂಡರ್‌ದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಕ್ರಮ ಜರುಗಿಸಲಾಗುವುದು.
13) ಯಶಸ್ವಿ ಟೆಂಡರ್‌ದಾರರಿಗೆ ಇ.ಎಂ.ಡಿ.ಮೊತ್ತವನ್ನು ಸಾಮಗ್ರಿಗಳನ್ನು ಸರಬರಾಜು ಮಾಡಿದ ನಂತರ ಹಿಂತಿರುಗಿಸಲಾಗುವುದು. ಇ.ಎಂ.ಡಿ.ಹಣಕ್ಕೆ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ.
14) ಅವಧಿ ಮೀರಿ ಬಂದ ಟೆಂಡರ್ ಲಕೋಟೆಗಳನ್ನು ಸ್ವೀಕರಿಸಲಾಗುವುದಿಲ್ಲ.
15) ಸಾಮಗ್ರಿಗಳನ್ನು ಸರಬರಾಜು ಮಾಡಲು ಆಯ್ಕೆಯಾದ ಟೆಂಡರ್‌ದಾರರು ಟೆಂಡರ್‌ನ ಎಲ್ಲಾ ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ರೂ.100–00ಗಳ ಛಾಪಾ ಕಾಗದದಲ್ಲಿ ಕರಾರು ಬರೆದು ಕೊಡಬೇಕು.

16) ಟೆಂಡರ್ ಫಾರಂನ್ನು ರೂ.5000–00ಗಳನ್ನು ಡಿ.ಡಿ.ಮೂಲಕ ಪಾವತಿಸಿ ಪಡೆಯಬೇಕು. ಹಾಗೂ ಈ ಹಣವನ್ನು ಮರು ಪಾವತಿಸಲಾಗುವುದಿಲ್ಲ.
17) ಟೆಂಡರ್ ಅರ್ಜಿಯನ್ನು ನಮೂದಿಸಿರುವ ಸಾಮಗ್ರಿಗಳ ಪರಿಮಾಣವನ್ನು ಅನುದಾನ ಲಭ್ಯತೆಗನುಗುಣವಾಗಿ ಪರಿಷ್ಕರಿಸುವ ಷರತ್ತಿಗೊಳಪಟ್ಟಿದೆ.
18) ಪ್ರಕಟಣೆಯೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿನ ಎಲ್ಲಾ 4 ಗುಂಪುಗಳಲ್ಲಿ ನಮೂದಿಸಿರುವ ಸಾಮಾಗ್ರಿಗಳಿಗೆ ದರಪಟ್ಟಿ ಸಲ್ಲಿಸುವುದು. ಪ್ರತಿಯೊಂದು ಸಾಮಗ್ರಿಗಳಿಗೆ ಹಾಗೂ 4 ಗುಂಪುಗಳ ಪೈಕಿ ಎಲ್ಲಾ ಗುಂಪುಗಳ ಅಥವಾ ಯಾವುದಾದರು ಒಂದು ಗುಂಪಿಗೆ ದರಪಟ್ಟಿ ಸಲ್ಲಿಸಲು ಇಚ್ಚಿಸುವರು ಆಯಾಯ ಗುಂಪಿನ ಎಲ್ಲಾ ಸಾಮಾಗ್ರಿಗಳಿಗೆ ಕಡ್ಡಾಯವಾಗಿ ದರಗಳನ್ನು (ಅಂಕಿಗಳಲ್ಲಿ) ನಮೂದಿಸುವುದು.

ಫಾರಂ ನಂ____________________ ಬೆಲೆ ರೂ.1,000/-

**ಟೆಂಡರ್ ಫಾರಂ**

**(ಲಕೋಟೆ-1ರಲ್ಲಿ ಸಲ್ಲಿಸುವುದು)**

**ಜಿಲ್ಲಾಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಟೆಂಡರ್ ಪ್ರಕಟಣೆ ಸಂ:ಡಿಬಿಸಿಎಂ/ಬೆಂಗ್ರ/ಲೆಕ್/ಸಿಆರ್-170/2009-10** **ದಿನಾಂಕ:1/2/2010.**

**ವಿಷಯ:-** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ, ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಮೂಲಭೂತ ಸೌಕರ್ಯ ಒದಗಿಸಲು ಟೆಂಡರ್ ವಿವರ ಸಲ್ಲಿಸುವ ಮಾಹಿತಿಗಳು.

| | | | |
|---|---|---|---|
| | **ಅ) ಟೆಂಡರುದಾರರು/ಸಂಸ್ಥೆಗಳ ವಿವರ:-** | | |
| 1 | ಟೆಂಡರ್‌ದಾರರು ಸರಬರಾಜು ಮಾಡಲು ಇಚ್ಛಿಸಿರುವ ಸಂಸ್ಥೆಯ ಹೆಸರು | : | |
| 2 | ಟೆಂಡರ್‌ದಾರರ ಹೆಸರು ಮತ್ತು ವಿಳಾಸ, ಇ-ಮೇಲ್ | : | |
| 3 | ದೂರವಾಣಿ/ಮೊಬೈಲ್ ಸಂಖ್ಯೆ | : | |
| | **ಆ) ಟೆಂಡರ್‌ದಾರರು ಸಲ್ಲಿಸಬೇಕಾದ ದಾಖಲೆಗಳು:** | | |
| 1 | ಟೆಂಡರ್‌ದಾರರು ಹಿಂದಿನ 2 ವರ್ಷಗಳಲ್ಲಿ ಪ್ರತೀ ವರ್ಷ ಕನಿಷ್ಠ ರೂ.20.00ಲಕ್ಷಗಳ ವಹಿವಾಟು ನಡೆಸಿರುವ ಬಗ್ಗೆ ಪ್ರಮಾಣ ಪತ್ರ ಲಗತ್ತಿಸಬೇಕು. ಈ ಬಗ್ಗೆ 2007-08 ಹಾಗೂ 2008-09ನೇ ಸಾಲಿನ ಆಡಿಟ್ ವರದಿಯನ್ನು ಸಲ್ಲಿಸುವುದು. | : | |
| 2 | ಟೆಂಡರ್‌ದಾರರು ಹೊಂದಿರುವ ಆದಾಯ ತೆರಿಗೆ ಪ್ಯಾನ್ ಕಾರ್ಡ್ ಮತ್ತು ಸಂಖ್ಯೆ ನಮೂದಿಸುವುದು ಮತ್ತು 31/03/2009ರವರೆಗೆ ಆದಾಯ ತೆರಿಗೆ ಪಾವತಿ ಬಗ್ಗೆ ದಾಖಲೆ ಸಲ್ಲಿಸುವುದು. | : | |
| 3 | ಟೆಂಡರ್‌ದಾರರು ವ್ಯಾಟ್ ಸಂಖ್ಯೆ ಹೊಂದಿರಬೇಕು. (ಸಕ್ಷಮ ಪ್ರಾಧಿಕಾರದಿಂದ ಪಡೆದ ಪತ್ರದ ಪ್ರತಿ ಲಗತ್ತಿಸುವುದು ಮತ್ತು 31/03/2009 ರವರೆಗೆ ವ್ಯಾಟ್ ಪಾವತಿ ಬಗ್ಗೆ ದಾಖಲೆ ಸಲ್ಲಿಸುವುದು) | : | |
| 4 | ಇ.ಎಂ.ಡಿ.ಮೊತ್ತ ರೂ.1.40ಲಕ್ಷಗಳ ಡಿ.ಡಿ.ಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಹೆಸರಿಗೆ ಪಡೆದು ಲಗತ್ತಿಸುವುದು. | : | |

| :– 2 –: | | | |
|---|---|---|---|
| 5 | ಟೆಂಡರ್ ಫಾರಂನಲ್ಲಿ ನಮೂದಿಸಿದ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ ಸೂಕ್ತ ಪ್ರಾಧಿಕಾರದಿಂದ ಪಡೆದಿರುವ ಪರವಾನಗಿ ಸಂಖ್ಯೆ ನಮೂದಿಸುವುದು ಮತ್ತು ಚಾಲ್ತಿ ವರ್ಷಕ್ಕೆ ನವೀಕರಿಸಿದ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು. | : | |
| 6 | ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಸರಬರಾಜು ಮಾಡಿದ ಬಗ್ಗೆ ಇತ್ತೀಚಿನ 2 ವರ್ಷದ ಅನುಭವ ದೃಢೀಕರಣ ಪತ್ರ ಸಲ್ಲಿಸುವುದು. | : | |

ಮೇಲ್ಕಂಡ ಪ್ರಕಟಣೆಯಲ್ಲಿನ ಎಲ್ಲಾ ಅಂಶಗಳನ್ನು ಹಾಗೂ ಷರತ್ತುಗಳನ್ನು ಓದಿ, ಒಪ್ಪಿ, ಟೆಂಡರ್ ಸಲ್ಲಿಸಿರುತ್ತೇನೆ. ಮೇಲ್ಕಂಡ ದಾಖಲಾತಿಗಳ ಮೂಲ ಪ್ರತಿಯನ್ನು ಸಕ್ಷಮ ಪ್ರಾಧಿಕಾರದವರಿಗೆ ಅವಶ್ಯಕವಾಗಿ ಬೇಕಾಗುವ ವೇಳೆಯಲ್ಲಿ ಕೇಳಿದಾಗ ಹಾಜರುಪಡಿಸಲು ಒಪ್ಪಿರುತ್ತೇನೆ.

ಬೆಂಗಳೂರು **(ಟೆಂಡರ್‌ದಾರರ ಸಹಿ)**

ದಿನಾಂಕ: **ಸಂಸ್ಥೆಯ ಮೊಹರಿನೊಂದಿಗೆ**

## 1ನೇ ಲಕೋಟೆಯಲ್ಲಿ ಸಲ್ಲಿಸಬೇಕಾದ ದಾಖಲೆಗಳು: (ಟೆಕ್ನಿಕಲ್‌ಬಿಡ್ ಕವರ್)

1) ಟೆಂಡರ್‌ದಾರರು ಹಿಂದಿನ 2 ವರ್ಷಗಳಲ್ಲಿ ಪ್ರತಿ ವರ್ಷ ಕನಿಷ್ಠ ರೂ.20.00ಲಕ್ಷಗಳ ವಹಿವಾಟು ನಡೆಸಿರುವ ಬಗ್ಗೆ ಪ್ರಮಾಣ ಪತ್ರ ಲಗತ್ತಿಸಬೇಕು. ಈ ಬಗ್ಗೆ 2007–08 ಹಾಗೂ 2008–09ನೇ ಸಾಲಿನ ಆಡಿಟ್ ವರದಿಯನ್ನು ಸಲ್ಲಿಸುವುದು.
2) ಟೆಂಡರ್‌ದಾರರು ಹೊಂದಿರುವ ಆದಾಯ ತೆರಿಗೆ ಪ್ಯಾನ್ ಕಾರ್ಡ್ ಮತ್ತು ಸಂಖ್ಯೆ ನಮೂದಿಸುವುದು ಮತ್ತು 31/03/2009 ರವರೆಗೆ ಆದಾಯ ತೆರಿಗೆ ಪಾವತಿ ಬಗ್ಗೆ ದಾಖಲೆ ಸಲ್ಲಿಸುವುದು.
3) ಟೆಂಡರ್‌ದಾರರು ವ್ಯಾಟ್ ಸಂಖ್ಯೆ ಹೊಂದಿರಬೇಕು. (ಸಕ್ಷಮ ಪ್ರಾಧಿಕಾರದಿಂದ ಪಡೆದ ಪತ್ರದ ಪ್ರತಿ ಲಗತ್ತಿಸುವುದು ಮತ್ತು 31/03/2009 ರವರೆಗೆ ವ್ಯಾಟ್ ಪಾವತಿ ಬಗ್ಗೆ ದಾಖಲೆ ಸಲ್ಲಿಸುವುದು)
4) ಇ.ಎಂ.ಡಿ. ಮೊತ್ತ ರೂ.25000/–ಡಿ.ಡಿ.ಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಹೆಸರಿಗೆ ಪಡೆದು ಲಗತ್ತಿಸುವುದು.
5) ಟೆಂಡರ್ ಫಾರಂನಲ್ಲಿ ನಮೂದಿಸಿದ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ ಸೂಕ್ತ ಪ್ರಾಧಿಕಾರದಿಂದ ಪಡೆದಿರುವ ಪರವಾನಗಿ ಸಂಖ್ಯೆ ನಮೂದಿಸುವುದು ಮತ್ತು ಚಾಲ್ತಿ ವರ್ಷಕ್ಕೆ ನವೀಕರಿಸಿದ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು.
6) ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಸರಬರಾಕು ಮಾಡಿದ ಬಗ್ಗೆ ಇತ್ತೀಚಿನ 2 ವರ್ಷಗಳ ಸರಬರಾಜಿನ ದೃಢೀಕರಣ ಪತ್ರ ಸಲ್ಲಿಸುವುದು.

ಗುಂಪು – 2

2ನೇ ಲಕೋಟೆಯಲ್ಲಿ ಸಲ್ಲಿಸಬೇಕಾದ ಮಾಹಿತಿ

(ಸರಬರಾಜು ಮಾಡಬೇಕಾದ ಪ್ರತಿ ಸಾಮಗ್ರಿಗಳಿಗೆ ಕಡ್ಡಾಯವಾಗಿ ದರಗಳನ್ನು ನಮೂದಿಸಿ ದರಪಟ್ಟಿ ಸಲ್ಲಿಸುವುದು) ಸರಬರಾಜು ಮಾಡಬೇಕಾದ ಸಾಮಗ್ರಿಗಳು, ಅವುಗಳ ವಿವರ ಮತ್ತು ಬೇಕಾದ ಅಂದಾಜು ಪ್ರಮಾಣಗಳ ವಿವರ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಡೈನಿಂಗ್ ಟೇಬಲ್, ಬೆಂಚ್, ಡೆಸ್ಕ್ ಹಗೂ ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಬೇಕಾಗಿರುವ ವಿವರಗಳು.

| ಟೆಂಡರ್ ಸಲ್ಲಿಸುವವರರ ಹೆಸರು/ಸಂಸ್ಥೆಯ ಹೆಸರು, ಪೂರ್ಣ ವಿಳಾಸ ಮತ್ತು ದೂರವಾಣಿ/ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು | | | | | |
|---|---|---|---|---|---|
| ಕ್ರ. ಸಂ. | ಬೇಕಾಗುವ ವಸ್ತುಗಳ ಹೆಸರು | ಬೇಕಾಗುವ ವಸ್ತುಗಳ ವಿವರ | ಅಂದಾಜು ಪ್ರಮಾಣ | ದರ ಒಂದಕ್ಕೆ (ರೂ.ಗಳಲ್ಲಿ) | ಒಟ್ಟು ಮೊತ್ತ (ರೂ.ಗಳಲ್ಲಿ) |
| 1 | ಸ್ಟೇನ್‌ಲೆಸ್ ಸ್ಟೀಲ್ ಊಟದ ತಟ್ಟೆಗಳು | | 250 ನಂ. | | |
| 2 | ಸ್ಟೇನ್‌ಲೆಸ್ ಸ್ಟೀಲ್ ಲೋಟಗಳು | | 250 ನಂ. | | |
| 3 | ಸ್ಟೀಲ್ ಬೆಂಚ್ ಮತ್ತು ಡೆಸ್ಕ್ ಬುಕ್ ಸೆಲ್ಫ್ ಸಮೇತ | | 50 ನಂ. | | |
| 4 | ಡೈನಿಂಗ್ ಟೇಬಲ್ ಸ್ಟೂಲ್ ಸಮೇತ | | 15 ಸೆಟ್ | | |
| 5 | ಟೂ ಟೈಯರ್ ಸ್ಟೀಲ್ ಮಂಚಗಳು | | 25 ನಂ. | | |

ಸಂ:ಡಿಬಿಸಿಎಂ/ಬೆಂಗ್ರಾ/ಮೊದೇವಶಾ/ವಿನಿ/ಸಿಆರ್‌–170(1)/2009–10

ಜಿಲ್ಲಾಧಿಕಾರಿಯವರ ಕಛೇರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ದಿನಾಂಕ:9/2/2010.

## ' ಟೆಂಡರ್ ಪ್ರಕಟಣೆ '

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು.

**ಉಲ್ಲೇಖ:**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪತ್ರ ಸಂ:ಕವಶಿಸಸ/ಸಿಆರ್(ಶಿ) 208/09–10, ದಿನಾಂಕ:30/12/2009.

* * * * *

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಉಲ್ಲೇಖದ ಪತ್ರದಲ್ಲಿ ಜಿಲ್ಲಾಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಿದೆ. ಈ ಅನುದಾನದಲ್ಲಿ ಖರೀದಿಸಬೇಕಾಗಿರುವ ವಸ್ತುಗಳ ವಿವರ ಪರಿಮಾಣ ಹಾಗೂ ವಿನ್ಯಾಸಗಳನ್ನು ಸಹ ತಿಳಿಸಲಾಗಿದೆ. ಅದರಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರಡಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸರಬರಾಜು ಮಾಡಬೇಕಗಿರುವ ವಸ್ತುಗಳ ವಿವರಗಳನ್ನು ಗುಂಪು–2 ರ ಫಾರಂನಲ್ಲಿ ಕಾಣಿಸಲಾಗಿದೆ. ಮತ್ತು ವಸ್ತುಗಳ ವಿನ್ಯಾಸ ಹಾಗೂ ವಿವರಗಳನ್ನು ಅನುಬಂಧ–ಎ ನಲ್ಲಿ ಕಾಣಿಸಲಾಗಿದೆ. ಆಸಕ್ತಿಯುಳ್ಳ ಸರಬರಾಜು ಸಂಸ್ಥೆಗಳ/ತಯಾರಿಕ ಸಂಸ್ಥೆಗಳು ಟೆಂಡರ್‌ಗಳನ್ನು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರ ಕಛೇರಿಯಲ್ಲಿ ರೂ.500/–(ಐದು ನೂರು ರೂಪಾಯಿಗಳು) ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಹೆಸರಿನಲ್ಲಿ ಡಿ.ಡಿ. ಪಡೆದು, ಪಾವತಿಸಿ ಟೆಂಡರ್ ದಾಖಲೆ ಪಡೆಯಬಹುದು. ಟೆಂಡರ್ ಅರ್ಜಿಗಳನ್ನು 2 ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. ಟೆಂಡರ್‌ನಲ್ಲಿ ಇಟ್ಟಿರುವ ಟೆಕ್ನಿಕಲ್ ಬಿಡ್ ಲಕೋಟೆಗಳನ್ನು ಪ್ರಥಮವಾಗಿ ತೆರೆಯಲಾಗುವುದು. ಟೆಕ್ನಿಕಲ್ ಬಿಡ್ ಲಕೋಟೆಯಲ್ಲಿ ಇರಬೇಕಾದ ಎಲ್ಲಾ ದಾಖಲೆಗಳು ಸರಿಯಾಗಿದ್ದಲ್ಲಿ ಮಾತ್ರ 2ನೇ ಲಕೋಟೆಯಲ್ಲಿರುವ ಧರಪಟ್ಟಿ ಲಕೋಟೆಯನ್ನು ತೆರೆಯಲಾಗುವುದು.

1) ಟೆಂಡರ್ ಅರ್ಜಿಗಳನ್ನು ದಿನಾಂಕ: 11/2/2010 ರಿಂದ 26/2/2010 ವರೆಗೆ ಪಡೆಯಬಹುದು.
2) ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಮೊಹರು ಮಾಡಿದ ಎರಡು ಲಕೋಟೆ ಪದ್ಧತಿಯಲ್ಲಿ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಈ ಕಛೇರಿಗೆ ಸಲ್ಲಿಸಬಹುದು. ಟೆಂಡರ್ ಅರ್ಜಿಗಳನ್ನು ಕಡೆಯ ದಿನಾಂಕ: 26/2/2010 ಮಧ್ಯಾಹ್ನ 4.00 ಗಂಟೆಯೊಳಗೆ ಸಲ್ಲಿಸಬೇಕು. ಮೊಹರಾಗಿರುವ ಟೆಕ್ನಿಕಲ್ ಬಿಡ್ ಲಕೋಟೆಗಳನ್ನು ಅದೇ ದಿನ ತೆರೆಯಲಾಗುವುದು. ಟೆಂಡರ್ ಅರ್ಜಿಗಳನ್ನು ಸಲ್ಲಿಸಿದ ಸಂಸ್ಥೆಗಳ ಪ್ರತಿನಿಧಿ ಈ ಸಮಯದಲ್ಲಿ ಹಾಜರಿರಬಹುದಾಗಿದೆ.

ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯವರ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯಬಹುದಾಗಿದೆ. (**www.bangalorerural.nic.in**)

ಸಹಿ/
ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಪ್ರತಿಯನ್ನು ಕೆಳಕಂಡವರಿಗೆ ಸೂಕ್ತ ಕ್ರಮ ಹಾಗೂ ಮಾಹಿತಿಗಾಗಿ ಸಲ್ಲಿಸಿದೆ:–**

1) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ, ಬೆಂಗಳೂರು.
3) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
4) ಜಿಲ್ಲಾ ಟೆಂಡರ್ ಬುಲೆಟಿನ್ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5) ಉಪ ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.
6) ಕಛೇರಿ ಪ್ರತಿಗಳು.

ಜಿಲ್ಲಾಧಿಕಾರಿಯವರ ಪರವಾಗಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಬೆಂಗಳೂರು.

ಸಂ:ಡಿಬಿಸಿಎಂ/ಬೆಂಗ್ರಾ/ಮೊದೇವಶಾ/ವಿನಿ/ಸಿಆರ್–170/2009–10

ಜಿಲ್ಲಾಧಿಕಾರಿಯವರ ಕಛೇರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ದಿನಾಂಕ:9/2/2010.

## ' ***ಟೆಂಡರ್ ಪ್ರಕಟಣೆ*** '

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಗ್ರಾಮದಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೆಳಕಂಡ ಸಾಮಗ್ರಿಗಳನ್ನು ಖರೀದಿಸಲು ದ್ವಿ–ಲಕೋಟೆ ವಿಧಾನದಲ್ಲಿ ಟೆಂಡರ್ ದರಗಳನ್ನು ಆಹ್ವಾನಿಸಲಾಗಿದೆ.

1) ಶಾಲಾ ಬೆಂಚ್ ಮತ್ತು ಡೆಸ್ಕ್‌ಗಳು
2) ಸ್ಟೀಲ್ ಡೈನಿಂಗ್ ಟೇಬಲ್ ಸ್ಟೂಲ್ ಸಮೇತ
3) ಸ್ಟೀಲ್ ಟೂ ಟೈಯರ್ ಮಂಚಗಳು
4) ಸ್ಟೀಲ್ ತಟ್ಟೆ ಮತ್ತು ಲೋಟಗಳು

ಟೆಂಡರ್ ಅರ್ಜಿ ಮತ್ತು ವಿವರಗಳನ್ನು ಪಡೆಯಲು ಕೊನೇ **ದಿನಾಂಕ:25/2/2010 ಸಂಜೆ 4.00ಗಂಟೆವರೆಗೆ**
ಟೆಂಡರ್ ಅರ್ಜಿ ಫಾರಂ ಸಲ್ಲಿಸಲು ಕೊನೇ **ದಿನಾಂಕ:26/2/2010 ಸಂಜೆ 4.00ಗಂಟೆವರೆಗೆ**
ಟೆಂಡರ್ ಅರ್ಜಿ ಫಾರಂ ಪಡೆಯಲು ಮತ್ತು ಸಲ್ಲಿಸುವ **ವಿಳಾಸ** –

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಪೋಡಿಯಂ ಬ್ಲಾಕ್, ವಿ.ವಿ.ಟವರ್,
ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು–1.

ಸಹಿ/
ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.